# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

☎:08352-229051 www.kswu.ac.in Fax: 08352 -229057


ಸಂಖ್ಯೆ:ಮವಿವಿ/ಶೈಕ್ಷಣಿಕ/ಸಿಂಡಿಕೇಟ್–94/2016–17/2085 ದಿನಾಂಕ:19–11–2016

ಗೆ,
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ
ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ

**ವಿಷಯ**: ದಿನಾಂಕ:11–11–2016 ರಂದು ಮಧ್ಯಾಹ್ನ 2:30ಗಂಟೆಗೆ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣ ಆಡಳಿತ ಭವನದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

ಮಾನ್ಯರೆ,

ದಿನಾಂಕ: 11–11–2016ರಂದು ಮಧ್ಯಾಹ್ನ 2:30ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ "ಜ್ಞಾನಶಕ್ತಿ (ತೊರವಿ) ಆವರಣದ ಸಿಂಡಿಕೇಟ್ ಹಾಲ್"ನಲ್ಲಿ ಜರುಗಿದ **"2016–17ನೇ ಹಣಕಾಸು ಸಾಲಿನ ಐದನೆಯ ಹಾಗೂ 94ನೇ ಸಿಂಡಿಕೇಟ್ ಸಾಮಾನ್ಯ ಸಭೆಯ"** ನಡವಳಿಗಳನ್ನು ಇದರೊಂದಿಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ**

**ಅಡಕ: ನಡವಳಿಗಳು 1 ರಿಂದ 14 ಪುಟಗಳು**

**ಪ್ರತಿಗಳು:–**

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560001.
2. ಅಪರ ಮುಖ್ಯ ಕಾರ್ಯದರ್ಶಿಗಳು , ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು) ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ ಡಾ॥ ಬಿ.ಆರ್.ಅಂಬೇಡ್ಕರ ವೀದಿ, ಬೆಂಗಳೂರು – 560001.

# ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ ಸಿಂಡಿಕೇಟ್ ಸದಸ್ಯರ ಪಟ್ಟಿ

| ಕ್ರ.ಸಂ | ಕರಾವಿ ಅಧಿನಿಯಮ 2000 ಪ್ರಕರಣ 28 | ಸದಸ್ಯರ ಹೆಸರು | ಪದನಾಮ | ಇಂದ | ವರೆಗೆ |
|---|---|---|---|---|---|
| 1. | 1(ಎ) | ಪ್ರೊ.ಸಬಿಹಾ, ಕುಲಪತಿಗಳು | ಸಭಾಧ್ಯಕ್ಷರು | 20–6–2016 | |
| 2. | 1(ಬಿ) | ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 3. | 1(ಸಿ) | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 4. | 1(ಡಿ) | ಪ್ರೊ.ವಿಜಯಾ ಕೋರಿಶೆಟ್ಟಿ, ಡೀನರು ಸಮಾಜ ವಿಜ್ಞಾನ ನಿಕಾಯ. | ಸದಸ್ಯರು | 4–11–2016 | 3–11–2017 |
| 5. | 1(ಇ) | ಡಾ.ಸರಸ್ವತಿ.ಎಸ್ | ಸದಸ್ಯರು | 01–12–2014 | 09–02–2017 |
| 6. | 1(ಇ) | ಡಾ.ಶ್ರೀನಿವಾಸ ಬಳ್ಳಿ | ಸದಸ್ಯರು | 01–12–2014 | 10–04–2017 |
| 7. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 8. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 9. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 10. | 1(ಎಫ್) | ನಾಮನಿರ್ದೇಶನ ಆಗಿರುವುದಿಲ್ಲ | ಸದಸ್ಯರು | -- | |
| 11. | 1(ಜಿ) | ಡಾ.ಸತ್ಯಾನಂದ ಪಾತ್ರೋಟ | ಸದಸ್ಯರು | 19–02–2015 | 18–02–2018 |
| 12. | 1(ಜಿ) | ಶ್ರೀ.ಎಂ.ಎಲ್.ಶಾಂತಗಿರಿ | ಸದಸ್ಯರು | 19–02–2015 | 18–02–2018 |
| 13. | 1(ಜಿ) | ಡಾ.ಫರ್ಜಾನಾ.ಎಂ | ಸದಸ್ಯರು | 19–02–2015 | 18–02–2018 |
| 14. | 1(ಜಿ) | ಡಾ.ಸುಜಾತಾ ಎಸ್ ಜಂಗಮಶೆಟ್ಟಿ | ಸದಸ್ಯರು | 19–02–2015 | 18–02–2018 |
| 15. | 1(ಜಿ) | ಶ್ರೀ.ಆರ್.ಸಿ.ಪಾಟೀಲ | ಸದಸ್ಯರು | 19–02–2015 | 18–02–2018 |
| 16. | 1(ಜಿ) | ಶ್ರೀ.ರವೀಂದ್ರ ಭಾವಿಕಟ್ಟಿ | ಸದಸ್ಯರು | 19–02–2015 | 18–02–2018 |
| 17. | 1(ಹೆಚ್) | ಪ್ರೊ.ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | ಸದಸ್ಯರು | 01–06–2016 | 31–05–2017 |
| 18. | 1(ಐ) | ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 19. | 1(ಜೆ) | ಜಂಟಿ ನಿರ್ದೇಶಕರು, ಧಾರವಾಡ | ಸದಸ್ಯರು | -- | |
| 20. | 1(ಕೆ) | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು | -- | |
| 21. | ಪ್ರಕರಣ 18(2) | ಪ್ರೊ.ವಿ.ವಿ.ಮಳಗಿ, ಕುಲಸಚಿವರು(ಮೌ) | ಸದಸ್ಯರು | 14–7–2016 | |
| 22. | ಪ್ರಕರಣ 17(2) | ಪ್ರೊ. ಕೆ.ಪಿ.ಶ್ರೀನಾಥ್, ಕುಲಸಚಿವರು | ಸದಸ್ಯ – ಕಾರ್ಯದರ್ಶಿ | 18–06–2016 | |

## 94ನೇ ಸಿಂಡಿಕೇಟ್ ಸಭೆಯು ಮುಂದೂಡಿದ ಹಾಗೂ ದಿನಾಂಕ:11–11–2016ರ ಬೆಳಿಗ್ಗೆ 11:30ಕ್ಕೆ ಜರುಗಿದ ಸಭೆಯ ನಡವಳಿಗಳು

ಮಾನ್ಯ ಕುಲಪತಿಗಳಾದ ಪ್ರೊ.ಸಬಿಹಾ ರವರು ಎಲ್ಲ ಸದಸ್ಯರನ್ನು ಸ್ವಾಗತಿಸಿ ಹಾಗೂ ಕರ್ನಾಟಕ ರಾಜ್ಯ ಅಧಿನಿಯಮ 2000 ಪ್ರಕರಣ 28(1)(ಡಿ)ರನ್ವಯ ನಾಮನಿರ್ದೇಶಿತರಾದ ಪ್ರೊ ವಿಜಯಾ ಬಿ ಕೋರಿಶೆಟ್ಟಿ, ಡೀನರು ಸಮಾಜವಿಜ್ಞಾನ ನಿಕಾಯ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಇವರನ್ನು ಸಭಾ ಸದಸ್ಯರುಗಳಿಗೆ ಪರಿಚಯಿಸಿದರು.

**ಸಭೆಗೆ ಹಾಜರಾದ ಸದಸ್ಯರು**

| | | |
|---|---|---|
| 1. | ಪ್ರೊ. ಸಬಿಹಾ, ಕುಲಪತಿಗಳು | : ಸಭಾಧ್ಯಕ್ಷರು |
| 2. | ಪ್ರೊ. ವಿಜಯಾ ಬಿ ಕೋರಿಶೆಟ್ಟಿ ಡೀನರು ಸಮಾಜವಿಜ್ಞಾನ ನಿಕಾಯ | : ಸದಸ್ಯರು |
| 3. | ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ | : ಸದಸ್ಯರು |
| 4. | ಶ್ರೀ ಆರ್.ಸಿ.ಪಾಟೀಲ | : ಸದಸ್ಯರು |
| 5. | ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ | : ಸದಸ್ಯರು |
| 6. | ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 7. | ಪ್ರೊ.ಕೆ.ಪಿ.ಶ್ರೀನಾಥ್, ಕುಲಸಚಿವರು | : ಸದಸ್ಯ ಕಾರ್ಯದರ್ಶಿ |

**ಸಭೆಗೆ ಗೈರು ಹಾಜರಾದ ಸದಸ್ಯರು**

| | | |
|---|---|---|
| 1. | ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 3. | ಡಾ.ಸರಸ್ವತಿ ಎಸ್ | : ಸದಸ್ಯರು |
| 4. | ಡಾ.ಶ್ರೀನಿವಾಸ ಬಳ್ಳಿ | : ಸದಸ್ಯರು |
| 5. | ಡಾ.ಸತ್ಯಾನಂದ ಪಾತ್ರೋಟ | : ಸದಸ್ಯರು |
| 6. | ಡಾ.ಫರ್‌ಜಾನಾ ಎಂ | : ಸದಸ್ಯರು |
| 7. | ಡಾ.ಸುಜಾತಾ ಜಂಗಮಶೆಟ್ಟಿ | : ಸದಸ್ಯರು |
| 8. | ಶ್ರೀ ಆರ್.ಬಿ.ಭಾವಿಕಟ್ಟಿ | : ಸದಸ್ಯರು |
| 9. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 10. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 11. | ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| 12. | ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೆಂಗಳೂರು | : ಸದಸ್ಯರು |

ಮಾನ್ಯ ಕುಲಸಚಿವರು, ಸಭೆಯಲ್ಲಿ ಕೋರಂ ಇಲ್ಲದಿರುವ ಕಾರಣ, ಸಭೆಯನ್ನು ಮುಂದೂಡಿ ಅದೇ ದಿನ ಮಧ್ಯಾಹ್ನ 2:30ಕ್ಕೆ ನಡೆಸುವುದೆಂದು ತಿಳಿಸಿದರು. ಅದಕ್ಕೆ ಎಲ್ಲ ಸದಸ್ಯರು ಒಮ್ಮತದಿಂದ ಒಪ್ಪಿ, ಸಭೆಯನ್ನು ಮುಂದೂಡಿದರು.

ಸಭೆಗೆ ಹಾಜರಾಗಿರುವ ಎಲ್ಲ ಸದಸ್ಯರನ್ನು ಮಾನ್ಯ ಕುಲಸಚಿವರು ವಂದನೆಗಳನ್ನು ತಿಳಿಸಿದರು.

ಕುಲಸಚಿವರು
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ.

ಕುಲಪತಿಗಳು
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ.

## 94ನೇ ಸಿಂಡಿಕೇಟ್ ಸಭೆಯು ಮುಂದೂಡಿದ ಹಾಗೂ ದಿನಾಂಕ:11–11–2016ರ ಮಧ್ಯಾಹ್ನ 2:30ಕ್ಕೆ ಜರುಗಿದ ಸಭೆಯ ನಡವಳಿಗಳು

**ಸಭೆಗೆ ಹಾಜರಾದ ಸದಸ್ಯರು**

1. ಪ್ರೊ. ಸಬಿಹಾ, ಕುಲಪತಿಗಳು : ಸಭಾಧ್ಯಕ್ಷರು
2. ಪ್ರೊ. ವಿಜಯಾ ಬಿ ಕೋರಿಶೆಟ್ಟಿ ಡೀನರು ಸಮಾಜವಿಜ್ಞಾನ ನಿಕಾಯ : ಸದಸ್ಯರು
3. ಶ್ರೀ ಮುದುಕಪ್ಪ ಲಕ್ಷ್ಮಪ್ಪ ಶಾಂತಗಿರಿ : ಸದಸ್ಯರು
4. ಶ್ರೀ ಆರ್.ಸಿ.ಪಾಟೀಲ : ಸದಸ್ಯರು
5. ಪ್ರೊ. ಮಹೇಶ ಐ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ : ಸದಸ್ಯರು
6. ಪ್ರೊ.ವಿ.ವಿ.ಮಳಗಿ, ಕುಲಸಚಿವರು (ಮೌಲ್ಯಮಾಪನ) : ಸದಸ್ಯರು
7. ಪ್ರೊ.ಕೆ.ಪಿ.ಶ್ರೀನಾಥ್, ಕುಲಸಚಿವರು : ಸದಸ್ಯ ಕಾರ್ಯದರ್ಶಿ

**ಸಭೆಗೆ ಗೈರು ಹಾಜರಾದ ಸದಸ್ಯರು**

1. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
3. ಡಾ.ಸರಸ್ವತಿ ಎಸ್ : ಸದಸ್ಯರು
4. ಡಾ.ಶ್ರೀನಿವಾಸ ಬಳ್ಳಿ : ಸದಸ್ಯರು
5. ಡಾ.ಸತ್ಯಾನಂದ ಪಾತ್ರೋಟ : ಸದಸ್ಯರು
6. ಡಾ.ಫರ್‌ಜಾನಾ ಎಂ : ಸದಸ್ಯರು
7. ಡಾ.ಸುಜಾತಾ ಜಂಗಮಶೆಟ್ಟಿ : ಸದಸ್ಯರು
8. ಶ್ರೀ ಆರ್.ಬಿ.ಭಾವಿಕಟ್ಟಿ : ಸದಸ್ಯರು
9. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
10. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
11. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು : ಸದಸ್ಯರು
12. ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಬೆಂಗಳೂರು : ಸದಸ್ಯರು

ಮಾನ್ಯ ಕುಲಸಚಿವರು ಸದಸ್ಯರನ್ನು ಸಭೆಗೆ ಸ್ವಾಗತಿಸಿ ಮಾನ್ಯ ಕುಲಪತಿಗಳನ್ನು ಸಭೆಯನ್ನು ನಡೆಸಿಕೊಡಲು ಕುಲಸಚಿವರು ಕೋರಿದರು ನಂತರ ಕಾರ್ಯಸೂಚಿಯನ್ನು ಮಂಡಿಸಿದರು.

ದಿನಾಂಕ: 09–09–2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.

ಸಿಂಡಿಕೇಟ್ ಸದಸ್ಯರಾದ ಮಾನ್ಯ ಶ್ರೀನಿವಾಸ ಬಳ್ಳಿ ಅವರು ಸಿಂಡಿಕೇಟ್ ಪುರವಣಿ ಸಂಖ್ಯೆ:03, ಅಧ್ಯಕ್ಷರ ಅಪ್ಪಣೆ ಇತರೆ ವಿಷಯಗಳ ಸಂಖ್ಯೆ:01 ಹಾಗೂ ಇತಿಹಾಸ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ರಮಾ ಗುಂಡುರಾವ ಅನ್ನುವ ಅಭ್ಯರ್ಥಿಗೆ ಆಯ್ಕೆ ಮಾಡುವಾಗ ಅನ್ಯಾಯವಾಗಿದೆ ಬಗ್ಗೆ ತಮ್ಮ ಆಕ್ಷೇಪಣೆಯನ್ನು ದಿನಾಂಕ:07–10–2016ರಂದು ಇ–ಮೇಲ್ ಮುಖಾಂತರ ವ್ಯಕ್ತ ಪಡಿಸಿರುತ್ತಾರೆ.

**ನಿರ್ಣಯ:–ಈ ಮೇಲಿನ ವಿಷಯಗಳನ್ನು ಮುಂದೂಡಲಾಯಿತು, ಹಾಗೂ ದಿನಾಂಕ:9–9–2016ರಂದು ಜರುಗಿದ ಸಿಂಡಿಕೇಟ್ ಸಭೆಯ ಇನ್ನುಳಿದ ನಡವಳಿಗಳನ್ನು ಸ್ಥಿರೀಕರಿಸಲಾಯಿತು.**

ದಿನಾಂಕ: 16-7-2016 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ.

**ನಿರ್ಣಯ:- ದಿನಾಂಕ:16-7-2016ರಂದು ಜರುಗಿದ ಸಿಂಡಿಕೇಟ್ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಚರ್ಚಿಸಿ ಅನುಮೋದಿಸಲಾಯಿತು.**

**94ನೇ ಸಿಂಡಿಕೇಟ್ ಸಭೆಯ ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 01*

**ವಿಷಯ:** ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಪದವಿ ಮಹಿಳಾ ಮಹಾವಿದ್ಯಾಲಯದ ಹೊಸ ಸಂಶೋಧನಾ ಕೇಂದ್ರದ ಮಾನ್ಯತೆ ಹಾಗೂ ಮುಂದುವರಿಕೆ ಮಂಜೂರಾತಿಗಾಗಿ ತಜ್ಞರ ಸಮಿತಿಯ ವರದಿ ಸಲ್ಲಿಸಿರುವ ಕುರಿತು.

**ಉಲ್ಲೇಖ:**1.ಸಿಂಡಿಕೇಟ ನಡಾವಳಿ ಸಂಖ್ಯೆ 10/92 ದಿನಾಂಕ: 16-07-2016.
2.ಅಧಿಸೂಚನೆ ಸಂಖ್ಯೆ.:ಮವಿವಿ/ಶೈಕ್ಷಣಿಕ/ಸಿಂಡಿಕೇಟ/2016-17/1297.
3.ಕರಾಮವಿವಿ/ಶೈಕ್ಷಣಿಕ/2016-17/1316 ದಿನಾಂಕ:12-08-2016.
4.ಕರಾಮವಿವಿ/ಶೈಕ್ಷಣಿಕ/2016-17/1444 ದಿನಾಂಕ:20-08-2016.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರಗಳ ಮಾನ್ಯತೆ ಹಾಗೂ ಮುಂದುವರಿಕೆ ಕುರಿತಂತೆ ಉಲ್ಲೇಖ (1) ರನ್ವಯ ತಜ್ಞರ ಸಮಿತಿ ರಚಿಸಲು ಅನುಮೋದಿಸಿದಂತೆ ಹಾಗೂ ಉಲೇಖ (3) ಮತ್ತು (4) ರಲ್ಲಿ ಆದೇಶಿಸಿದಂತೆ ಕಲಬುರಗಿಯ ಶ್ರೀಮತಿ. ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯ(ರಸಾಯನಶಾಸ್ತ್ರ) ಹಾಗೂ ಬೀ ಬೀ ರಜಾ ಮಹಿಳಾ ಮಹಾವಿದ್ಯಾಲಯ(ಇಂಗ್ಲೀಷ) ಮತ್ತು ಹುಬ್ಬಳ್ಳಿಯ ಎಸ್.ಜೆ.ಎಮ್.ವ್ಹಿ.ಎಸ್ ಮಹಿಳಾ ಮಹಾವಿದ್ಯಾಲಯದ(ವಾಣಿಜ್ಯ) ಸಂಶೋಧನಾ ಕೇಂದ್ರದ ಮಾನ್ಯತೆ ಮತ್ತು ಮುಂದುವರಿಕೆಯ ಕುರಿತು ಸಂಶೋಧನಾ ಕೇಂದ್ರಗಳ ತಪಾಸಣೆ ಮಾಡಿದ ತಜ್ಞರ ಸಮಿತಿಯು ವರದಿಯನ್ನು ಸಲ್ಲಿಸಿದ್ದು ಅದನ್ನು ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:- ಶ್ರೀಮತಿ. ವೀರಮ್ಮ ಗಂಗಸಿರಿ ಮಹಿಳಾ ಮಹಾವಿದ್ಯಾಲಯ(ರಸಾಯನಶಾಸ್ತ್ರ) ಹಾಗೂ ಬೀ ಬೀ ರಜಾ ಮಹಿಳಾ ಮಹಾವಿದ್ಯಾಲಯ(ಇಂಗ್ಲೀಷ) ಮತ್ತು ಹುಬ್ಬಳ್ಳಿಯ ಎಸ್.ಜೆ.ಎಮ್.ವ್ಹಿ.ಎಸ್ ಮಹಿಳಾ ಮಹಾವಿದ್ಯಾಲಯದ(ವಾಣಿಜ್ಯ) ಸಂಶೋಧನಾ ಕೇಂದ್ರದ ಮಾನ್ಯತೆ ಮತ್ತು ಮುಂದುವರಿಕೆಯ ಕುರಿತು ತಪಾಸಣೆ ಮಾಡಿದ ತಜ್ಞರ ಸಮಿತಿಯ ವರದಿಯನ್ನು ಒಪ್ಪಿಕೊಳ್ಳಲಾಯಿತು.**

**94ನೇ ಸಿಂಡಿಕೇಟ್ ಸಭೆಯ ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ :02*

**ವಿಷಯ:** ಎನ್.ಟಿ.ರೆಂಕಿನಗೌಡರ ಇವರ ಪಿಎಚ್.ಡಿ ವಿದ್ಯಾರ್ಥಿನಿಯರ ವಿಷಯ ಬದಲಾವಣೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ 2009-10ನೇ ಶೈಕ್ಷಣಿಕ ಸಾಲಿನಲ್ಲಿ ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿನಿ ಎನ್.ಟಿ.ರೆಂಕಿನಗೌಡ ಇವರು ವ್ಯವಹಾರ ಅಧ್ಯಯನದಲ್ಲಿ ದಿನಾಂಕ:18-12-2014 ರಂದು ಪಿಎಚ್.ಡಿ ಪದವಿ ಪ್ರಧಾನ ಮಾಡಲಾಗಿತ್ತು. ಸದರಿ ವಿದ್ಯಾರ್ಥಿನಿ ಸ್ನಾತಕೋತ್ತರ ಅಧ್ಯಯನವನ್ನು ವಾಣಿಜ್ಯ ವಿಷಯದಲ್ಲಿ ಪೂರ್ಣಗೊಳಿಸಿದ್ದು, ಇವಳ ಪದವಿಯಲ್ಲಿ ವಾಣಿಜ್ಯ ಹಾಗೂ ವ್ಯವಹಾರ ಅಧ್ಯಯನ ಎಂದು ತಿದ್ದುಪಡಿ ಮಾಡಿ ಪರಿಷ್ಕೃತ ಅಧಿಸೂಚನೆಯನ್ನು ದಿನಾಂಕ:13-08-2016ರಂದು ಹೊರಡಿಸಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:-***ಅನುಮೋದಿಸಲಾಯಿತು ಹಾಗೂ ಇನ್ನು ಮುಂದೆ ಇಂಥ ಪ್ರಕರಣ ಬಂದಲ್ಲಿ ಮಾನ್ಯ ಕುಲಪತಿಗಳಿಗೆ ಮುಂದಿನ ಕ್ರಮಜರುಗಿಸಲು ಅಧಿಕಾರ ನೀಡಲಾಯಿತು..***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 03*

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ(36)ರನ್ವಯ 2016-17ನೇ ಸಾಲಿನ ಪದವಿ ಪರೀಕ್ಷಾ ಮಂಡಳಿ(BOAE) ನೇಮಕಾತಿ ಸಭೆ ದಿನಾಂಕ:6-9-2016 ಮತ್ತು 7-9-2016ರಂದು ಎರಡು ದಿನದ BOAE ಸಭೆಯು ಸಿಂಡಿಕೇಟ್ ಸಭಾ ಭವನದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಹಾಗೂ ಕುಲಸಚಿವರು(ಮೌ) ಉಪಸ್ಥಿತಿಯಲ್ಲಿ, ವಿವಿಧ ವಿಷಯಗಳ ನಿಕಾಯ ಮುಖ್ಯಸ್ಥರುಗಳು ಮತ್ತು ವಿಷಯ ತಜ್ಞರು ಕೂಡಿಕೊಂಡು ಸಭೆ ಜರುಗಿಸಿ ವಿವಿಧ ವಿಷಯಗಳಿಗೆ ಪರೀಕ್ಷಾ ಮಂಡಳಿಗಳನ್ನು BOE ರಚಿಸಲಾಯಿತು. ಆಯಾ ವಿಷಯಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಯಾದಿಗೆ ಒಪ್ಪಿಗೆ ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ದಿನಾಂಕ:6-9-2016 ಮತ್ತು 7-9-2016ರಂದು ಜರುಗಿದ ಎರಡು ದಿನದ BOAE ಸಭೆಯಲ್ಲಿ ವಿವಿಧ ವಿಷಯಗಳಿಗೆ ಪರೀಕ್ಷಾ ಮಂಡಳಿಗಳನ್ನು ಹಾಗೂ ಆಯಾ ವಿಷಯಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಯಾದಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 04*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಎಲ್ಲ ಸ್ನಾತಕ ಹಾಗೂ ಸ್ನಾತಕೊತ್ತರ, ಪಿ.ಜಿ.ಡಿಪ್ಲೋಮಾ, ಸರ್ಟಿಫಿಕೇಟ ಕೋರ್ಸ, ಮರುಮೌಲ್ಯಮಾಪನ ಶುಲ್ಕ, ಅಂಕಪಟ್ಟಿ ಶುಲ್ಕ, ತೇರ್ಗಡೆ ಪ್ರಮಾಣ ಪತ್ರ ಶುಲ್ಕ, ಅರ್ಜಿ ಪರಿಶೀಲನಾ ಶುಲ್ಕ, ನೈಜತೆ ಪ್ರಮಾಣ ಪತ್ರ ಶುಲ್ಕ, ಘಟಿಕೋತ್ಸವ ಪ್ರಮಾಣ ಪತ್ರ ಹಾಗೂ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ಇತರ ಶುಲ್ಕಗಳನ್ನು 2016-17ನೇ ಶೈಕ್ಷಣಿಕ ಸಾಲಿನ ಹಾಗೂ ಮುಂಬರುವ ಶೈಕ್ಷಣಿಕ ವರ್ಷದಿಂದ 10% ರಷ್ಟು ಶುಲ್ಕವನ್ನು ಹೆಚ್ಚಿಸಿ ಭರಿಸಿಕೊಳ್ಳಲು ಹಾಗೂ ಹೆಚ್ಚಿಸಿದ ಶುಲ್ಕವನ್ನು ಜಾರಿಗೆ ತರುವ ಪೂರ್ವದಲ್ಲಿ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ನಿರ್ಣಯ:- 2016-17ನೇ ಶೈಕ್ಷಣಿಕ ಸಾಲಿನ ಹಾಗೂ ಮುಂಬರುವ ಶೈಕ್ಷಣಿಕ ವರ್ಷದಿಂದ 10% ರಷ್ಟು ಶುಲ್ಕವನ್ನು ಹೆಚ್ಚಿಸಿ ಭರಿಸಿಕೊಳ್ಳಲು ಅನುಮೋದಿಸಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 05*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿದಂತೆ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳ ಮುದ್ರಣಗಳ ಪ್ರಕ್ರಿಯೆಗಳನ್ನು ಸರ್ಕಾರದ ಪತ್ರ ಸಂಖ್ಯೆ ಇಡಿ-386-ಯುಎನ್ಇ 2016, ದಿನಾಂಕ:29-09-2016 ರ ಪತ್ರದ ಪ್ರಕಾರ Mysore Sales International Limited ಉದ್ಯಮದಿಂದ ಮುದ್ರಿಸಿಲು ಸರ್ಕಾರವು ತಿಳಿಸಿರುವ ಕಾರಣ, ಇನ್ನು ಮುಂದೆ 2016-17 ಹಾಗೂ ಮುಂದಿನ ಶೈಕ್ಷಣಿಕ ವರ್ಷಗಳಿಂದ ನೇರವಾಗಿ Mysore Sales International Limited ಉದ್ಯಮದಿಂದ ಖರೀದಿಸಲು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

**ನಿರ್ಣಯ:-**

**ಸರ್ಕಾರದ ಪತ್ರ ಸಂಖ್ಯೆ ಇಡಿ-386-ಯುಎನ್ಇ 2016, ದಿನಾಂಕ:29-09-2016 ರ ಪತ್ರದ ಪ್ರಕಾರ ಕ್ರಮಜರುಗಿಸಲು ತೀರ್ಮಾನಿಸಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ: 06*

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೊತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ವ್ಯಾಸಂಗ ಮಾಡಿರುವ ವಿದ್ಯಾರ್ಥಿನಿಯರಿಗೆ ಹೊರರಾಜ್ಯದಲ್ಲಿ ಸರ್ಕಾರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಆಯಾ ರಾಜ್ಯ ಸರ್ಕಾರಗಳು ವಿದ್ಯಾರ್ಥಿನಿಯರಿಗೆ ಅವರು ವ್ಯಾಸಂಗ ಮಾಡಿರುವ ವಿಶ್ವವಿದ್ಯಾಲಯದಿಂದ ಫಲಿತಾಂಶ ಪ್ರಕಟಿಸಿದ ದಿನಾಂಕ, ವ್ಯಾಸಂಗ ಮಾಡಿದ ಮಾಧ್ಯಮ, ಮೋಡ ಆಫ್ ಸ್ಟಡಿ ಸರ್ಟಿಫಿಕೇಟ್ ಸಲುವಾಗಿ ಅರ್ಜಿಗಳು ಬರುತ್ತಿದ್ದು ಈವರೆಗೆ ಈ ಸರ್ಟಿಪಿಕೇಟ್‌ಗಳಿಗೆ ಶುಲ್ಕ ನಿಗದಿಪಡಿಸಿರುವುದಿಲ್ಲ. ಇನ್ನು ಮುಂದೆ ಈ ಎಲ್ಲ ದಾಖಲೆಗಳನ್ನು ವಿದ್ಯಾರ್ಥಿನಿಯರಿಗೆ, ಸಂಬಂಧಿಸಿದ ಇಲಾಖೆಗಳಿಗೆ ದೃಢೀಕೃತ ಪತ್ರ ನೀಡಲು ಪ್ರತಿ ವಿದ್ಯಾರ್ಥಿನಿಗೆ ಪ್ರತಿ ಕೋರ್ಸಿಗೆ ರೂಪಾಯಿ 550/- ಗಳನ್ನು ನಿಗದಿಪಡಿಸುವುದು ಮತ್ತು ನಕಲು (ಡ್ಯೂಪ್ಲಿಕೇಟ್) ಘಟಿಕೋತ್ಸವ ಪ್ರಮಾಣಪತ್ರಕ್ಕೆ 1000/-ರೂಪಾಯಿಗಳು, ನಕಲು(ಡ್ಯೂಪ್ಲಿಕೇಟ್) ರ್‍ಯಾಂಕ ಸರ್ಟಿಪೀಕೇಟ್ ರೂಪಾಯಿ 250/- ಹಾಗೂ ತುರ್ತು (ತತ್ಕಾಲ್‌ದಡಿ) ತೇರ್ಗಡೆ ಪ್ರಮಾಣಪತ್ರ ನೀಡಲು 250/- ರೂಪಾಯಿ ನಿಗದಿಪಡಿಸಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

**ನಿರ್ಣಯ:- ಮುಂದೂಡಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ: 07*

ಸ್ನಾತಕೋತ್ತರ ಪದವಿಗಳ ಪ್ರಥಮ ಹಾಗೂ ತೃತೀಯ ಸೆಮಿಸ್ಟರನ ಉತ್ತರ ಪತ್ರಿಕೆಗಳನ್ನು ಇಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುವ ಬದಲು ಇತರ ವಿಶ್ವವಿದ್ಯಾಲಯಗಳಲ್ಲಿ ರೂಢಿಯಲ್ಲಿರುವಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಸಹ 2016-17ನೇ ಶೈಕ್ಷಣಿಕ ಸಾಲಿನ ಹಾಗೂ ಮುಂಬರುವ ಶೈಕ್ಷಣಿಕ ವರ್ಷಗಳಿಂದ ಉತ್ತರ ಪತ್ರಿಕೆಗಳನ್ನು ಒಬ್ಬ ಪರೀಕ್ಷಕರಿಂದ ಮಾತ್ರ ಮೌಲ್ಯಮಾಪನ ಮಾಡಿಸುವದು ಹಾಗೂ ಒಂದು ವೇಳೆ ವಿಭಾಗಗಳಲ್ಲಿ ಖಾಯಂ ಪ್ರಾಧ್ಯಾಪಕರು ಇಲ್ಲದಿದ್ದಲ್ಲಿ ಹೊರಗಿನ ವಿಶ್ವವಿದ್ಯಾಲಯದಿಂದ ಒಬ್ಬ ಮೌಲ್ಯಮಾಪಕರನ್ನು ಕರೆಯಿಸಿ ಏಕಮುಖವಾಗಿ ಮೌಲ್ಯಮಾಪನ ಮಾಡಿಸುವದು ಹಾಗೂ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರನ ಉತ್ತರ ಪತ್ರಿಕೆಗಳನ್ನು ಇಬ್ಬರು ಪರೀಕ್ಷಕರಿಂದ ಮೌಲ್ಯಮಾಪನ ಮಾಡಿಸುವ ರೂಢಿಯನ್ನು ಜಾರಿಗೆ ತರಲು ಸಿಂಡಿಕೇಟ್ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಮುಂದೂಡಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

# *ಸಿಂಡಿಕೇಟ್ ಐಟಂ ಸಂಖ್ಯೆ: 08*

**ವಿಷಯ:-** Prof. Abdul Khadar Farooqui ಇವರ ಹೆಸರಿನಿಂದ ಚಿನ್ನದ ಪದಕ ನೀಡುವ ಕುರಿತು.

ಬಿ.ಎಚ್.ಕದಿಮ್ ಕಾರ್ಯದರ್ಶಿಗಳು, ಹಜರತ್ ಗಂಜ್ ಉಲ್-ಉಲಮ್ ಬಜಮ್ ಎ ಆದಾಬ ಉರ್ದು ವಿಜಯಪುರ, ಇವರು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ ಬಿ.ಎ.ವಿಷಯದಲ್ಲಿ (Optional Urdu) ವಿಷಯಕ್ಕೆ ಪ್ರಥಮ ಯತ್ನದಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿದ ಬಿ.ಎ. (Optional Urdu) ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದವರಿಗೆ Prof. Abdul Khadar Farooqui ಇವರ ಹೆಸರಿನಿಂದ ಚಿನ್ನದ ಪದಕ ನೀಡಲು ಕೇಳಿಕೊಂಡು ಠೇವಣಿ ವಂತಿಗೆ ರೂ.50,000/- ದಿನಾಂಕ:9-9-2016 ಸಿದ್ದೇಶ್ವರ ಸಹಕಾರಿ

ಬ್ಯಾಂಕ್ ನಿಯಮಿತ ವಿಜಯಪುರ ರ ಪ್ರಕಾರ ಡಿ.ಡಿ.ಯನ್ನು ನೀಡಿರುತ್ತಾರೆ. ಕಾರಣ 2016–17ನೇ ಶೈಕ್ಷಣಿಕ ವರ್ಷದಿಂದ ಚಿನ್ನದ ಪದಕ ನೀಡಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಅನುಮೋದಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 09*

**ವಿಷಯ:–** ಕಟ್ಟಡ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು.

ದಿನಾಂಕ:22–9–2016ರಂದು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಜರುಗಿದ ಕಟ್ಟಡ ಸಮಿತಿ ಸಭೆಯಲ್ಲಿ ಆರು ವಿಷಯಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ

**ನಿರ್ಣಯ:–ಕಟ್ಟಡ ಸಮಿತಿ ಸಭೆಯ ನಡವಳಿ ಸಂಖ್ಯೆ:3,4 ಹಾಗೂ 6ನ್ನು ಅನುಮೋದಿಸಲಾಯಿತು. ಹಾಗೂ ಇನ್ನುಳಿದ ನಡವಳಿ ಸಂಖ್ಯೆ:1,2,5 ಮುಂದೂಡಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 10*

**ವಿಷಯ:–** ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸುವ ಕುರಿತು.

ದಿನಾಂಕ:22–9–2016ರಂದು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಏಳು ವಿಷಯಗಳ ಕುರಿತು ಚರ್ಚಿಸಿ ಅನುಮೋದಿಸಲಾಯಿತು. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 11*

**ವಿಷಯ:–** ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಪ್ರಮುಖ ಸಂಶೋಧನಾ ವರದಿ (Major Research Project Report) ಮೌಲ್ಯಮಾಪನದ ಸಂಭಾವನೆಯನ್ನು ನಿಗದಿಪಡಿಸುವ ಕುರಿತು

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯ ಕೈಕೊಂಡಿರುವ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಪ್ರಮುಖ ಸಂಶೋಧನಾ ವರದಿ(UGC Major Research Project Report) ಅನ್ನು UGC XI$^{th}$ Plan ಪ್ರಕಾರ ಇಬ್ಬರು ವಿಷಯ ತಜ್ಞರಿಂದ ಮೌಲ್ಯಮಾಪನ ಮಾಡಿಸಬೇಕಿರುವುದರಿಂದ ಸದರಿ ಮೌಲ್ಯಮಾಪನಕ್ಕೆ ಸಂಭಾವನೆಯನ್ನು ನಿಗದಿಪಡಿಸಬೇಕಿದ್ದು, ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ನಿರ್ದೇಶನಕ್ಕಾಗಿ ಮಂಡಿಸಿದೆ.

**ನಿರ್ಣಯ:–**

***ಪಿಎಚ್.ಡಿ ಪ್ರಬಂಧವನ್ನು ಮೌಲ್ಯಮಾಪನ ಮಾಡುವ ತಜ್ಞರಿಗೆ ನೀಡುವ ಸಂಭಾವನೆಯನ್ನೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಪ್ರಮುಖ ಸಂಶೋಧನಾ ವರದಿ (Major Research Project Report) ಮೌಲ್ಯಮಾಪನ ಮಾಡುವ ತಜ್ಞರಿಗೆ ನೀಡಲು ತೀರ್ಮಾನಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಐಟಂ ಸಂಖ್ಯೆ: 12*

***ಸಿಂಡಿಕೇಟ್ ಸದಸ್ಯರಾದ ಮಾನ್ಯ ಮಾನ್ಯ ಮಹೇಶ ಚಿಂತಾಮಣಿ ಅವರು ಈ ಕೆಳಕಂಡ ಪ್ರಸ್ತಾವನೆ ಸಲ್ಲಿಸಿರುತ್ತಾರೆ.***

**ವಿಷಯ:** ವಿಶ್ವವಿದ್ಯಾಲಯದ ಮುಂಬರುವ ಎಂಟನೆಯ ವಾರ್ಷಿಕ ಘಟಿಕೋತ್ಸವ ಕುರಿತು

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಮುಂಬರುವ ಎಂಟನೆಯ ವಾರ್ಷಿಕ ಘಟಿಕೋತ್ಸವ ಜರುಗಿಸುವ ದಿನಾಂಕ ನಿಗದಿಪಡಿಸುವ ಮತ್ತು ಘಟಿಕೋತ್ಸವ ಪೂರ್ವಭಾವಿ ಸಿದ್ಧತೆ ಕೈಗೊಳ್ಳುವ ಬಗ್ಗೆ.

ನಿರ್ಣಯ:–

**ವಿಶ್ವವಿದ್ಯಾಲಯದ ಎಂಟನೆಯ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿ ಸಿದ್ಧತೆ ಹಾಗೂ ಘಟಿಕೋತ್ಸವದ ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಯಿತು. ಕುಲಸಚಿವರು(ಮೌ) ಇವರಿಗೆ ಪರೀಕ್ಷಾ ಸಂಬಂಧಪಟ್ಟ ಸಿದ್ಧತೆಗಳನ್ನು ಮಾಡಲು ತಿಳಿಸಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 1*

**ವಿಷಯ:** 2009–10 ಹಾಗೂ 2010–2011 ನೇ ಸಾಲಿಗೆ ಪ್ರವೇಶ ಪಡೆದು ಸ್ನಾತಕ ಪದವಿಯನ್ನು ಪೂರ್ಣಗಿಳಿಸಿದ 06 ವರ್ಷದ ಅವಧಿಯು ಮುಗಿದ ವಿದ್ಯಾರ್ಥಿನಿಯರಿಗೆ ಸ್ನಾತಕ ಪದವಿಯನ್ನು ಪೂರ್ಣಗೊಳಿಸಲು ಅವಕಾಶ ನೀಡುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಿಳಾ ವಿಶ್ವವಿದ್ಯಾಲಯದ ಕ್ರಮನಿಯಮಾವಲಿಯ ಪ್ರಕಾರ ಪ್ರವೇಶ ಪಡೆದ ದಿನಾಂಕದಿಂದ 06 ವರ್ಷಗಳಲ್ಲಿ ಮಾತ್ರ ಪದವಿ ಪೂರ್ಣಗೊಳಿಸಲು ಅವಕಾಶ ಇರುತ್ತದೆ. 2009–2010 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಕೋರ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರ 6 ವರ್ಷ ಅವಧಿ ಮುಗಿದು 8ನೇ ವರ್ಷ ಜಾರಿಯಲ್ಲಿ ಇರುತ್ತದೆ. ಹಾಗೂ 2010–2011 ಪ್ರವೇಶ ಪಡೆದ ವಿದ್ಯಾರ್ಥಿನಿಯರ 6ವರ್ಷ ಅವಧಿ ಮುಗಿದು 7ನೇ ವರ್ಷ ಜಾರಿಯಲ್ಲಿ ಇರುತ್ತದೆ. ಆದ್ದರಿಂದ ವಿವಿಧ ಕಾರಣಗಳಿಂದ ಸ್ನಾತಕ ಪದವಿಯನ್ನು ಪೂರ್ಣಗೊಳಿಸಿದ 06ವರ್ಷಗಳ ಅವಧಿ ಮೀರಿದ ವಿದ್ಯಾರ್ಥಿನಿಯರಿಗಾಗಿ ಅವರ ಭವಿಷ್ಯದ ಹಿತದೃಷ್ಟಿಯಿಂದ ನವೆಂಬರ/ಡಿಶೆಂಬರ್ – 2016ರಲ್ಲಿ, ಪ್ರಥಮ, ತೃತೀಯ ಹಾಗೂ ಐದನೇ ಸೆಮಿಸ್ಟರ್ ಮತ್ತು ಮೇ/ಜೂನ್ –2017ರಲ್ಲಿ ದ್ವಿತಿಯ ಚತುರ್ಥ ಹಾಗೂ ಆರನೇ ಸೆಮಿಸ್ಟರ್ ಪದವಿ ಪೂರ್ಣಗೊಳಿಸಲು ಅವಕಾಶ ನೀಡುವ ಕುರಿತು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:– ಇದೊಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ ಅನುಮೋದಿಸಲಾಯಿತು***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 2*

**ವಿಷಯ:** ದಿನಾಂಕ:18–10–2016ರಂದು ಜರುಗಿದ ಪ.ಜಾ/ಪ.ಪಂ ಘಟಕದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

*ನಿರ್ಣಯ:–*

***ಪ.ಜಾ/ಪ.ಪಂ ಘಟಕದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಅನುಮೋದಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 3*

**ವಿಷಯ:** ಅಂತರ್‌ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮೋದನೆ ನೀಡಿ, ನೋಂದಣಿ ಶುಲ್ಕ, ಪ್ರಯಾಣ ಭತ್ಯೆ, ದಿನ ಭತ್ಯೆ ಮಂಜೂರಿಸುವ ಕುರಿತು.

**ಉಲ್ಲೇಖ:-** ಡಾ.ಪಿ.ಜಿ.ತಡಸದ, ಮುಖ್ಯಸ್ಥರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಇವರ ಪತ್ರ ಸಂಖ್ಯೆ:KSWU/LISD/2016-17/131, ದಿ:17-10-2016

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಡಾ.ಪಿ.ಜಿ.ತಡಸದ, ಮುಖ್ಯಸ್ಥರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಇವರ "Growth Models Economics" ಎಂಬ ಪ್ರಬಂಧ ದಿನಾಂಕ:12-12-2016 ರಿಂದ ದಿನಾಂಕ:15-12-2016ರ ವರೆಗೆ Nancy France ನಲ್ಲಿ ಜರುಗಲಿರುವ COLLNET Global Interdisciplinary Research Network ಇವರು ಆಯೋಜಿಸಿರುವ 12th ಅಂತರ್‌ರಾಷ್ಟ್ರೀಯ ಸಮ್ಮೇಳನ ಹಾಗೂ 17th COLLNET Meeting 2016ಗೆ ಆಯ್ಕೆಯಾಗಿದ್ದು, ಸದರಿ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ಕೋರಿದ್ದಾರೆ ಹಾಗೂ ನೋಂದಣಿ ಶುಲ್ಕ, ಪ್ರಯಾಣ ಭತ್ಯೆ, ದಿನ ಭತ್ಯೆ ಮಂಜೂರಿಸಲು ವಿನಂತಿಸಿದ್ದಾರೆ. ಅದರ ವಿವರ ಈ ಕೆಳಗಿನಂತಿದೆ.

| | | |
|---|---|---|
| 1. | TA II AC by Train and Economy Class by air (including local conveyance, Visacharge health travel Insurance) | Rs.75,000=00 |
| 2. | Registration Fee 220 Euro | Rs.17,600=00 |
| 3. | DA Within India Rs 750/- perday (750X4=3,000) | Rs. 03000=00 |
| 4. | DA in France 100dollars per day (100X67X6) | Rs. 40,200=00 |
| | Total | Rs1,35,800=00 |

ಸದರಿಯವರು ಹೀಗೆ ಒಟ್ಟು ರೂ.1,35,800/- ಗಳಲ್ಲಿ 50% ಮೊತ್ತವನ್ನು ಅಂದರೆ ರೂ. 67,900/- ಗಳನ್ನು ಮುಂಗಡವಾಗಿ ನೀಡಲು ಹಾಗೂ ದಿನಾಂಕ9-12-2016 ರಿಂದ 18-12-2016ರ ವರೆಗೆ ಒಓಡಿ ಮಂಜೂರಿಸಲು ವಿನಂತಿಸಿದ್ದಾರೆ ಆದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- ಸಿಂಡಿಕೇಟ್ ಸಭೆಯು ಡಾ.ಪಿ.ಜಿ.ತಡಸದ, ಮುಖ್ಯಸ್ಥರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಇವರಿಗೆ Nancy France ನಲ್ಲಿ ಜರುಗಲಿರುವ COLLNET Global Interdisciplinary Research Network ಇವರು ಆಯೋಜಿಸಿರುವ 12th ಅಂತರ್‌ರಾಷ್ಟ್ರೀಯ ಸಮ್ಮೇಳನಕ್ಕೆ ಹಾಗೂ 17th COLLNET Meeting 2016ಗೆ ಹೋಗಲು ಅನುಮತಿ ನೀಡಲಾಗಿದೆ. ಸದರಿಯವರಿಗೆ ನೋಂದಣಿ ಶುಲ್ಕ, ಪ್ರಯಾಣ ಭತ್ಯೆ, ದಿನ ಭತ್ಯೆ ಮಂಜೂರಿಸಲಾಯಿತು. ದಿನಾಂಕ:9-12-2016 ರಿಂದ 18-12-2016ರ ವರೆಗೆ (ಪ್ರಯಾಣ ದಿನಗಳಗೊಂಡು) ಒಓಡಿ ನೀಡಲಾಗಿದೆ.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 4*

**ವಿಷಯ:-** ಶ್ರೀ ಬಸವರಾಜ ಕೆ ಪಾಟೀಲ, ಸಹಾಯಕ ಕಾರ್ಯನಿರ್ವಹಕ ಅಭಿಯಂತರರು ಇವರಿಗೆ ಸ್ಥಾನಿಕ ಅಭಿಯಂತರರ(RE) ಹುದ್ದೆಯ ಪ್ರಭಾರ ವಹಿಸುವ ಕುರಿತು.

**ಉಲ್ಲೇಖ:-** ಕಛೇರಿ ಆದೇಶ ಸಂಖ್ಯೆ: ಮವಿವಿ/ಶೈಕ್ಷಣಿಕ/ಸಿಂಡಿಕೇಟ್/2008-09/5091 ದಿ:12-12-08

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದಲ್ಲಿ ಸ್ಥಾನಿಕ ಅಭಿಯಂತರರ ಹುದ್ದೆ ಖಾಲಿ ಇರುತ್ತದೆ. ಈಗಾಗಲೇ ನಮ್ಮ ವಿಶ್ವವಿದ್ಯಾಲಯದಲ್ಲಿ ನಿಯೋಜನೆ ಮೇರೆಗೆ ಸಹಾಯಕ ಕಾರ್ಯನಿರ್ವಹಕ ಅಭಿಯಂತರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಬಸವರಾಜ ಕೆ ಪಾಟೀಲ, ಇವರಿಗೆ ಸ್ಥಾನಿಕ ಅಭಿಯಂತರರ ಹುದ್ದೆಯ ಪ್ರಭಾರವನ್ನು ಹಾಗೂ ಸ್ಥಾನಿಕ ಅಭಿಯಂತರರಿಗೆ ಇರುವ ಉಲ್ಲೇಖ:1ರನ್ವಯ ಮಹಿಳಾ ವಿಶ್ವವಿದ್ಯಾಲಯದ ಅಧಿಕಾರ ನಿಯೋಗ ತಪ್ಸಿಲು (Delegation of Power) ವಹಿಸಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- ಶ್ರೀ ಬಸವರಾಜ ಕೆ ಪಾಟೀಲ, ಸಹಾಯಕ ಕಾರ್ಯನಿರ್ವಹಕ ಅಭಿಯಂತರರು ಇವರಿಗೆ ಸ್ಥಾನಿಕ ಅಭಿಯಂತರರ(RE) ಹುದ್ದೆಯ ಪ್ರಭಾರವನ್ನು ಹಾಗೂ ಸ್ಥಾನಿಕ ಅಭಿಯಂತರರಿಗೆ ಇರುವ (Delegation of Power) ವಹಿಸಲು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 5*

Sub:- To consider the Outcome of the Vision -2021 Round Table Conference Action Plan.

Decision:-

*The Syndicate Resolve to approve of the Vision – 2021 Round Table Conference Action Plan and Registrar has been authorized to Monitor the Program.*

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 6*

ಪರೀಕ್ಷಾ ವಿಭಾಗದಲ್ಲಿ ವಿವಿಧ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಶುಲ್ಕವನ್ನು ಶೇ.10%ರಂತೆ ಹೆಚ್ಚಸಿ, ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ಅಧಿಸೂಚನೆ ನೀಡಲಾಗಿದೆ. ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ:- ***ಘಟನೋತ್ತರ ಅನುಮೋದನೆ ನೀಡಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 7*

ವಿಷಯ:- ದೂರ ಶಿಕ್ಷಣ ನಿರ್ದೇಶನಾಲಯದ ಒಟ್ಟು ಎಂಟು ಕೋರ್ಸುಗಳಿಗೆ ಕಾರ್ಯಕ್ರಮ ಸಂಯೋಜಕರುಗಳ(Programme Coordinator) ನೇಮಕಾತಿ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ನಿರ್ದೇಶನಾಲಯದ ಒಟ್ಟು ಎಂಡು ಕೋರ್ಸುಗಳಿಗೆ ದಿನಾಂಕ:22-10-2016ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರ/ಸಂಯೋಜಕರ ಸಭೆಯಲ್ಲಿ ಚರ್ಚಿಸಿ ಎಂಟು ಜನ ಕಾರ್ಯಕ್ರಮ ಸಂಯೋಜಕರು (Programme Coordinator)ಗಳ ನೇಮಕದ ಬಗ್ಗೆ ಪ್ರಸ್ತಾಪಿಸಲಾಗಿದೆ. ಅದರ ವಿವರ ಈ ಕೆಳಗಿನಂತಿದೆ.

**ಕಾರ್ಯಕ್ರಮ ಸಂಯೋಜಕರು**

| ಕ್ರ.ಸಂ | ವಿಷಯ | ಸಂಯೋಜಕರ ಹೆಸರು |
|---|---|---|
| 1. | ಬಿ.ಎ(ಸಾಮಾನ್ಯ) | ಡಾ.ಆರ್.ವಿ.ಗಂಗಶೆಟ್ಟಿ |
| 2. | ಬಿ.ಕಾಂ | ಡಾ.ಮಲ್ಲಿಕಾರ್ಜುನ ಎನ್.ಎಲ್ |
| 3. | ಎಂ.ಎ(ಇಂಗ್ಲೀಷ) | ಪ್ರೊ.ಪಿ.ಕಣ್ಣನ್ |
| 4. | ಎಂ.ಎ(ಕನ್ನಡ) | ಡಾ.ಎನ್.ಬಿ.ಪವಾರ |
| 5. | ಎಂ.ಎ(ಸಮಾಜಶಾಸ್ತ್ರ) | ಡಾ.ಎಂ.ಪಿ.ಬಳಿಗಾರ |
| 6. | ಎಂ.ಎ(ಮಹಿಳಾ ಅಧ್ಯಯನ) | ಪ್ರೊ ಆರ್.ಸುನಂದಮ್ಮ |
| 7. | ಎಂ.ಎ(ಅರ್ಥಶಾಸ್ತ್ರ) | ಪ್ರೊ.ಡಿ.ಎಂ.ಮದರಿ |
| 8. | ಎಂ.ಕಾಂ | ಪ್ರೊ ಎಸ್.ಬಿ.ಕಾಮಶೆಟ್ಟಿ |

ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:–** ***ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 8*

**ವಿಷಯ:–** ದೂರ ಶಿಕ್ಷಣ ನಿರ್ದೇಶನಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ಅಧ್ಯಯನ ಮಂಡಳಿಗಳ ರಚನೆ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ದೂರ ಶಿಕ್ಷಣ ನಿರ್ದೇಶನಾಲಯದ ಎರಡು ಸ್ನಾತಕ(ಬಿ.ಎ, ಬಿ.ಕಾಂ) ಮತ್ತು ಆರು ಸ್ನಾತಕೋತ್ತರ(ಕನ್ನಡ, ಇಂಗ್ಲೀಷ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮಹಿಳಾ ಅಧ್ಯಯನ, ಎಂ.ಕಾಂ) ಹೀಗೆ ಒಟ್ಟು ಎಂಟು ಕೋರ್ಸುಗಳಿಗೆ ಅಧ್ಯಯನ ಮಂಡಳಿಗಳನ್ನು ರಚಿಸಬೇಕಾಗಿರುತ್ತದೆ. 2017–18ನೇ ಸಾಲಿನಿಂದ ಹೊಸ ಪಠ್ಯಕ್ರಮ ರಚನೆಗಾಗಿ ವಿಶ್ವವಿದ್ಯಾಲಯದ ಈಗಿರುವ(Regular) ಅಧ್ಯಯನ ಮಂಡಳಿಗಳನ್ನೇ ದೂರಶಿಕ್ಷಣಕೂ ಬಳಸಿಕೊಳ್ಳುವ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–*** **. 2017–18ನೇ ಸಾಲಿನಿಂದ ಹೊಸ ಪಠ್ಯಕ್ರಮ ರಚನೆಗಾಗಿ ವಿಶ್ವವಿದ್ಯಾಲಯದ ಈಗಿರುವ(Regular) ಅಧ್ಯಯನ ಮಂಡಳಿಗಳನ್ನೇ ದೂರಶಿಕ್ಷಣಕ್ಕೂ ಬಳಸಿಕೊಳ್ಳಲು ಸಿಂಡಿಕೇಟ್ ಪರಿಗಣಿಸಿ** ***ಅನುಮೋದಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11–11–2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 9*

**ವಿಷಯ:–** 2016–17 ನೇ ಶೈಕ್ಷಣಿಕ ಸಾಲಿನ ಎಂ.ಫಿಲ್ ಮತ್ತು ಪಿಎಚ್.ಡಿ ಪ್ರವೇಶ ಶುಲ್ಕದ ಕುರಿತು.

ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ 2016–17ನೇ ಶೈಕ್ಷಣಿಕ ಸಾಲಿನ ಎಂ.ಫಿಲ್ ಮತ್ತು ಪಿಎಚ್.ಡಿ ಪ್ರವೇಶಕ್ಕಾಗಿ ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಶೇ 10% ಶುಲ್ಕ ಹೆಚ್ಚಿಸಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:–*** **2016–17ನೇ ಶೈಕ್ಷಣಿಕ ಸಾಲಿನ ಎಂ.ಫಿಲ್ ಮತ್ತು ಪಿಎಚ್.ಡಿ ಪ್ರವೇಶಕ್ಕಾಗಿ ಶೇ 10% ಶುಲ್ಕ ಹೆಚ್ಚಿಸಿ ಅಧಿಸೂಚನೆ ಹೊರಡಿಸಲು** ***ಅನುಮೋದಿಸಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 10*

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ(36)ರನ್ವಯ 2016-17ನೇ ಸಾಲಿನ ಸ್ನಾತಕೋತ್ತರ ಪರೀಕ್ಷಾ ಮಂಡಳಿ(BOAE) ನೇಮಕಾತಿ ಸಭೆ ದಿನಾಂಕ:24-10-2016 ಮತ್ತು 28-10-2016 ರಂದು ಎರಡು ದಿನದ BOAE ಸಭೆಯು ಸಿಂಡಿಕೇಟ್ ಸಭಾ ಭವನದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಹಾಗೂ ಕುಲಸಚಿವರು(ಮೌ) ಉಪಸ್ಥಿತಿಯಲ್ಲಿ, ವಿವಿಧ ವಿಷಯಗಳ ನಿಕಾಯ ಮುಖ್ಯಸ್ಥರುಗಳು ಮತ್ತು ವಿಷಯ ತಜ್ಞರು ಕೂಡಿಕೊಂಡು ಸಭೆ ಜರುಗಿಸಿ ವಿವಿಧ ವಿಷಯಗಳಿಗೆ ಪರೀಕ್ಷಾ ಮಂಡಳಿಗಳನ್ನು BOE ರಚಿಸಲಾಯಿತು. ಆಯಾ ವಿಷಯಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಯಾದಿಗೆ ಒಪ್ಪಿಗೆ ಪಡೆಯಲು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:-**

**ದಿನಾಂಕ:24-10-2016 ಮತ್ತು 28-10-2016 ರಂದು ಜರುಗಿದ ಎರಡು ದಿನದ BOAE ಸಭೆಯಲ್ಲಿ ವಿವಿಧ ವಿಷಯಗಳಿಗೆ ಪರೀಕ್ಷಾ ಮಂಡಳಿಗಳನ್ನು ಹಾಗೂ ಆಯಾ ವಿಷಯಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ಯಾದಿಯನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಲಾಯಿತು.**

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 11*

ವಿಷಯ:- ಮಹಿಳಾ ವಿಶ್ವವಿದ್ಯಾಲಯದ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

ಉಲ್ಲೇಖ:- 1. ಡಾ.ಆಯಿಷಾ ಬಿರಾದಾರ, ಇವರ ಸ್ವ-ವಿವರ ಪತ್ರ ದಿನಾಂಕ:5-11-2016
2. ಕಛೇರಿ ಆದೇಶ ಸಂಖ್ಯೆ:ಕರಾಮವಿವಿ/ಆಡಳಿತ/2016-17/1992, ದಿ:5-11-2016

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಆರೋಗ್ಯದ ಹಿತ ದೃಷ್ಟಿಯಿಂದ ಮಹಿಳಾ ವೈದ್ಯಾಧಿಕಾರಿಗಳನ್ನು ರೂ.15,000/- ಗೌರವಧನ ನಿಗದಿಪಡಿಸಿ, ದಿನಾಂಕ:5-11-2016ರಿಂದ ಅನ್ವಯವಾಗುವಂತೆ ನೇಮಕಾತಿ ಮಾಡಿಕೊಂಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ:- *ಘಟನೋತ್ತರ ಅನುಮೋದನೆ ನೀಡಲಾಯಿತು.***

**94ನೇ ಸಿಂಡಿಕೇಟ್ ಸಭೆಯು ಮುಂದೂಡಿ ದಿನಾಂಕ:11-11-2016ರಂದು ಜರುಗಿದ ಸಭೆಯ ನಡವಳಿಗಳು**

## *ಸಿಂಡಿಕೇಟ್ ಪುರವಣಿ ಸಂಖ್ಯೆ: 12*

ವಿಷಯ:- Ordinanace – Grace Marks for Exams ಹಾಗೂ ವಿವಿಧ ವಿಭಾಗಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪರಿನಿಯಮಾವಳಿಗಳನ್ನು ಅನುಮೋದಿಸುವ ಕುರಿತು.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:10-11-2016ರಂದು ಜರುಗಿದ ಕರಡು ಪರಿನಿಯಮಾವಳಿ ಸಮಿತಿ ಸಭೆಯಲ್ಲಿ ವಿವಿಧ ಕೋರ್ಸ್‌ಗಳ ಪರಿನಿಯಮಾವಳಿಗಳು ಅನುಮೋದಿಸಲಾಯಿತು. ಅವುಗಳ ವಿವರ ಕೆಳಗಿನಂತಿವೆ.

1. Ordinance - Grace Marks for Exam.

2. Statute of 17 departments of Karanataka State Women's University, Vijayapura.
3. Statute of 11 departments of PG Centre Sindhanur, KSWU, Vijayapura.
4. Statute of PG Centre, Sindhanur, KSWU, Vijayapura.
5. Statute of 5 department of Mandya Extension Centre KSWU, Vijayapura.
6. Statute of Mandya Extension Centre, KSWU Vijayapura.

ಈ ವಿಷಯವನ್ನು ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

***ನಿರ್ಣಯ:- Ordinanace – Grace Marks for Exams ಹಾಗೂ ವಿವಿಧ ವಿಭಾಗಗಳ, ಮಂಡ್ಯ ಹಾಗೂ ಸಿಂದನೂರು ಸ್ನಾತ್ತಕೋತ್ತರ ಕೇಂದ್ರಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪರಿನಿಯಮಾವಳಿಗಳನ್ನು ಅನುಮೋದಿಸಲಾಯಿತು.***

**ಕುಲಸಚಿವರಾದ ಪ್ರೊ.ಕೆ.ಪಿ.ಶ್ರೀನಾಥ್ ಅವರು ಸಭೆಯನ್ನು ಅರ್ಥಪೂರ್ಣಗೊಳಿಸಿದ, ಸೂಕ್ತ ಸಲಹೆಗಳನ್ನು ಮುಂದಿಟ್ಟ ಎಲ್ಲ ಸದಸ್ಯರಿಗೆ ವಂದನೆಗಳನ್ನು ಸಲ್ಲಿಸಿದರು.**

**ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿಗಳು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

**ಕುಲಪತಿಗಳು ಹಾಗೂ ಸಭಾಧ್ಯಕ್ಷರು**
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ